ಶ್ರೀ ಡಿ.ವಿ. ಸದಾನಂದಗೌಡ :— ಕಾಸರಗೋಡಿನವರು ಪಟ್ಟಿ ಸೀರೆ ತರುತ್ತಾರೆಂದು ಇದ್ದ ಸೀರೆಯನ್ನು ಬೆಂಕಿಗೆ ಹಾಕಿ ಕುಳಿತುಕೊಂಡಿದ್ದಾರೆ. ಕಾಸರಗೋಡಿನ ಕನ್ನಡಿಗರ ಸಮಸ್ಯೆ ಏನಾಗಿದೆ ಎಂದರೆ, ಬೆತ್ತಲೆಯಾಗಿ ಕುಳಿತಂತೆ ಆಗಿದೆ. ದಯಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಅದರ ಬಗ್ಗೆ ಚಿಂತನೆ ನಡೆಸಬೇಕು. ಅಲ್ಲಿ ಈಗ ಕನ್ನಡ ಇಲ್ಲವೇ ಇಲ್ಲ, ಇನ್ನು ಎರಡು ವರ್ಷ ಹೋದರೆ ಅಲ್ಲಿ ಪೂರ್ತಿ ಮಲೆಯಾಳಿ ಆಗಿ ಬಿಡುತ್ತದೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಸದಸ್ಯರು ಇದರ ಬಗ್ಗೆ ಅರ್ಥ ಮಾಡಿಕೊಳ್ಳಬೇಕು. ಇಸ್ಯೂ ಒಂದೇ, ಅದರಲ್ಲಿ ಎರಡು ಸೇರಿಕೊಂಡಿದೆ. ಗಡಿ ಸಮಸ್ಯೆ ಮಹಾಜನ್ ವರದಿಯಲ್ಲಿ ಸೇರಿಕೊಂಡಿದೆ. ಇಸ್ಯೂ ಒಟ್ಟಿಗೆ ಬರಬೇಕು. ಕಾಸರಗೋಡಿನ ಬಗ್ಗೆ ಕಾಳಜಿ ಸರ್ಕಾರಕ್ಕೆ ಇಲ್ಲವೆಂದು ಅಲ್ಲ. ಮಹಾರಾಷ್ಟ್ರ ಕರ್ನಾಟಕದ ಸಮಸ್ಯೆ, ಕರ್ನಾಟಕ ಹಾಗೂ ಕೇರಳದ ಸಮಸ್ಯೆ ಒಟ್ಟಿಗೆ ಎರಡು ಇರುವುದರಿಂದ ಇದು ಒಂದೇ ಸಲಕ್ಕೆ ತೀರ್ಮಾನವಾಗಬೇಕಾಗಿದೆ. ಕಾಸರಗೋಡಿನ ಬಗ್ಗೆ ಕೂಡ ಸರ್ಕಾರಕ್ಕೆ ಕಾಳಜಿ ಇದೆ. ಮಾನ್ಯ ಗೃಹಮಂತ್ರಿಗಳಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಒಂದು ಮಾತನ್ನು ಹೇಳುತ್ತಾರೆ.

ಶ್ರೀ ಎನ್. ಯೋಗೀಶ್ ಭಟ್ :— ಸರ್ಕಾರಕ್ಕೆ ಕಾಸರಗೋಡಿನ ಕನ್ನಡಿಗರ ಬಗ್ಗೆ ಖಂಡಿತ ಕಾಳಜಿ ಇಲ್ಲ. ಬೆಳಗಾಂ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರಶ್ನೆ ಕೇಳುವವರು ಯಾರು? ಅದಕ್ಕೆ ಉತ್ತರವನ್ನು ಹೇಳುವವರು ಯಾರು. ಒಂದು ಅರ್ಥವೇ ಆಗುತ್ತಾ ಇಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಅದರ ಸಮಸ್ಯೆಯೇ ಆ ರೀತಿಯಾಗಿದೆ.

4) ಮಂತ್ರಿಗಳ ಹೇಳಿಕೆ

ದಿನಗೂಲಿ ನೌಕರರ ಮುಷ್ಕರದ ಬಗ್ಗೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ಈ ಸದನದಲ್ಲಿ ಶೂನ್ಯ ವೇಳೆಯ ಸಂದರ್ಭದಲ್ಲಿ ಮಾನ್ಯ ವಾಟಾಳ್ ನಾಗರಾಜ್ ರವರು ಹಾಗೂ ಶ್ರೀ ಶ್ರೀರಾಮರೆಡ್ಡಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಮೂರು ದಿವಸಗಳಿಂದ ರಾಜ್ಯಾದ್ಯಂತ ಮುಷ್ಕರ ಮಾಡುತ್ತಿದ್ದ ವಿವಿಧ ಇಲಾಖೆಗಳ ದಿನಗೂಲಿ ನೌಕರರು, ಇವರು ಸರ್ಕಾರದ ಅಂಗ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥವರೆಲ್ಲರೂ ಶ್ರೀಮಾನ್ ಶರ್ಮಾರವರ ನೇತೃತ್ವದಲ್ಲಿ ಒಂದು ಧರಣಿಯನ್ನು ಮಾಡುತ್ತಿದ್ದಾರೆ. ಸುಮಾರು 15 ರಿಂದ 20 ಸಾವಿರ ಜನ ದಿನಗೂಲಿ ನೌಕರರು ಈ ಮುಷ್ಕರದಲ್ಲಿ ನಿರತರಾಗಿದ್ದರು. ಆ ದಿನಗೂಲಿ ನೌಕರರ ಜೊತೆಯಲ್ಲಿ ಸರ್ಕಾರದ ಅಧಿಕಾರಿ ಮಿತ್ರರು ನಾವು ಕಳೆದ ಮೂರು ದಿನಗಳಿಂದ ಮಾತುಕತೆ ಮಾಡಿದ್ದೇವೆ. ಈಗ ನಾವು ಒಂದು ವಿಚಾರಕ್ಕೆ

ಬಂದಿದ್ದೇವೆ, ಹಾಗೂ ನಮ್ಮ ಮುಖ್ಯ ಮಂತ್ರಿಗಳು ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಈಗಾಗಲೇ ನಾವು ಈ ರೀತಿಯಾದ ನೌಕರರ ವರ್ಗದವರು ಇಟ್ಟಿರತಕ್ಕಂಥ ಬೇಡಿಕೆಯನ್ನು ಪರಿಶೀಲನೆ ಮಾಡಲಿಕ್ಕೆ ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ನಾವು ಮಾಡಿದ್ದೇವೆ. ಸಮಿತಿಗೆ ಕೆಲವು ಮಾಹಿತಿಗಳನ್ನು ಈ ದಿನಗೂಲಿ ನೌಕರ ಸಂಘದ ಪದಾಧಿಕಾರಿಗಳು ಕೊಡಲು ಒಪ್ಪಿಕೊಂಡಿದ್ದಾರೆ. ಈ ಮಧ್ಯದಲ್ಲಿ, ಈ ವರದಿ ಬಂದ ನಂತರ ದಿನಗೂಲಿ ಸಂಘದ ಪದಾಧಿಕಾರಿಗಳೂ ಕೊಡಬೇಕಾಗಿರತಕ್ಕಂಥ ಎಲ್ಲಾ ಮಾಹಿತಿಯನ್ನು ಕೊಟ್ಟಮೇಲೆ, ನಮ್ಮ ಸರ್ಕಾರದ ಅಧಿಕಾರಿಗಳ ಒಂದು ಸಮಿತಿಯು ಆ ವರದಿಯನ್ನು ನಮಗೆ ಕೊಡುವುದು ಇದೆ. ಆ ವರದಿಯನ್ನು ನಮ್ಮ ಸರ್ಕಾರದ ಕೆಲವು ಮಂತ್ರಿಗಳು ಪರಿಶೀಲನೆ ಮಾಡಿ ಸಚಿವ ಸಂಪುಟದ ಮುಂದೆ ತರತಕ್ಕಂಥ ಭರವಸೆಯನ್ನು ಮಾನ್ಯ ಅಧ್ಯಕ್ಷರಿಗೆ ಕೊಡಬೇಕು ಮತ್ತು ಈ ಸದನಕ್ಕೆ ತಿಳಿಸಬೇಕೆನ್ನುವ ದೃಷ್ಟಿಯಿಂದ ಇದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಈಗ ಈ ಸದನದ ಮೂಲಕವಾಗಿ ಪದಾಧಿಕಾರಿಗಳಿಗೆ ಮತ್ತು ಮುಷ್ಕರ ನಿರತರಾಗಿರುವ ನನ್ನ ಸ್ನೇಹಿತರಿಗೆ ಮುಷ್ಕರವನ್ನು ನಿಲ್ಲಿಸಿ ಅವರೆಲ್ಲರೂ ತಮ್ಮ ಊರುಗಳಿಗೆ ಮತ್ತು ಸೇವೆಗೆ ವಾಪಸ್ಸು ಹೋಗಬೇಕೆಂದು ನಾನು ಅವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಸರ್ಕಾರದ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚನೆ ಮಾಡಿರತಕ್ಕಂತಹ ಸಮಿತಿಯ ವರದಿಯು ಬಂದ ತಕ್ಷಣವೇ ಮಂತ್ರಿಗಳ ಸಮಿತಿಯು ಅದನ್ನು ಪರಿಶೀಲನೆ ಮಾಡಿದ ನಂತರ ಸಚಿವ ಸಂಪುಟದ ಮುಂದೆ ತರುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :— ತಾವು ಈ ಸಮಿತಿಗೆ ಏನೇನು ವಿಷಯಗಳನ್ನು ಕೊಟ್ಟಿದ್ದೀರಿ? ಆ ಸಮಿತಿಯವರು ಎಷ್ಟು ದಿವಸದೊಳಗೆ ವರದಿಯನ್ನು ಕೊಡುತ್ತಾರೆ? ಈಗ ಮುಷ್ಕರ ನಿರತರಾಗಿರುವವರನ್ನು ಹೋಗಿ ಎಂದು ಹೇಳಬೇಕಾದರೆ ಅವರಿಗೆ ಒಂದು ಭರವಸೆಯು ಬೇಕಲ್ಲವೇ? ಇಷ್ಟು ದಿವಸದೊಳಗಾಗಿ ವರದಿಯನ್ನು ತರಿಸುತ್ತೇವೆಂದು ಹೇಳಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಛೇರ್ಮನ್‌ರವರೆ, ಈಗಾಗಲೇ ಸರ್ಕಾರದ ಅಧಿಕಾರಗಳ ಮುಖಂಡತ್ವದಲ್ಲಿ ರಚನೆ ಮಾಡಿರತಕ್ಕಂತಹ ಸಮಿತಿಯ ಮುಂದೆ ಟರ್ಮ್ಸ್ ಆಫ್ ರೆಫರೆನ್ಸ್ ಏನೇನು ಎನ್ನತಕ್ಕಂಥದ್ದು ಇದೆ. ಅವರು ಕೊಟ್ಟಿರತಕ್ಕಂತಹ ಬಹುತೇಕ ಬೇಡಿಕೆಗಳಲ್ಲಿ ಅವೆಲ್ಲವೂ ಇದೆ. ಆ ಸಮಿತಿಯಲ್ಲಿರತಕ್ಕಂತಹ ಕೆಲವು ವಿಚಾರಗಳು ಸಹ ಇದೆ. ಅದನ್ನು ನಮ್ಮ ಸಮಿತಿ ಪರಿಶೀಲನೆ ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ :— ಅವರು ನಿಮ್ಮ ಸಮಿತಿಯ ವರದಿಗೆ ಒಪ್ಪಿದ್ದಾರೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ನಾನು ಅವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :— ಮುಷ್ಕರ ನಿರತರಾಗಿರುವವರು 3-4 ದಿವಸಗಳಿಂದ ಬಹಳ ನೋವಿನಲ್ಲಿದ್ದಾರೆ. ಇದು ಒಂದು ಕಣ್ಣೀರಿನ ಕಥೆ. ಅವರು ಬಹಳ ದುರಂತವಾಗಿ ಕುಳಿತಿದ್ದಾರೆ. ತಾವು ಹೋಗಿ ಅವರನ್ನು ಭೇಟಿಮಾಡಿ ಅದನ್ನು ಸರಿಪಡಿಸಿ ಎನ್ನುವುದು ನನ್ನ ಮಾತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ನಾನು ಮತ್ತು ನಮ್ಮ ಅಧಿಕಾರಿಗಳು 3 ದಿವಸದಿಂದ ಸತತವಾಗಿ ಪ್ರತಿ ನಿತ್ಯವು ಸಹಿತ ಸುಮಾರು 2 ಗಂಟೆಗಳ ಕಾಲ ಚರ್ಚೆ ಮಾಡಿದ್ದೇನೆ. ಇವತ್ತು ನಾನು ಅವರಿಗೆ ಭರವಸೆಯನ್ನು ಈ ಸದನದ ಮೂಲಕವಾಗಿ ಕೊಡಲಿಕ್ಕೆ ಬಯಸುತ್ತೇನೆ.

5) ವಿತ್ತೀಯ ಕಾರ್ಯಕಲಾಪ

1999-2000ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ(ಮುಂವ).

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಮಾನ್ಯ ಛೇರ್ಮನ್‌ರವರೇ, ನಾನು ನಿನ್ನೆ ಈ ಬಜೆಟ್ ಮೇಲೆ ಮಾತನಾಡುವಾಗ ಸರ್ಕಾರದವರು ರೈತರ ಬಗ್ಗೆ ಅವರಿಗೆ ಯಾವ ರೀತಿಯಾಗಿ ಸಹಾಯ ಮಾಡುತ್ತೀರಿ ಅಥವಾ ಇಲ್ಲಿಯವರೆಗೆ ಏನೇನು ಸಹಾಯ ಮಾಡಿದ್ದೀರಿ ಎನ್ನತಕ್ಕಂಥದ್ದು ಒಂದು ಶ್ವೇತ ಪತ್ರವನ್ನು ಪಬ್ಲಿಷ್ ಮಾಡಬೇಕೆಂದು ಕೇಳಿಕೊಂಡಿದ್ದೆವು. ಅದರಲ್ಲಿ ನಿಸರ್ಗ ವಿಕೋಪದಿಂದ ಕಳೆದುಕೊಂಡಂತಹ ಮನೆಗಳು ಜನ ಜಾನುವಾರುಗಳು, ಅದಕ್ಕೆ ಕೊಟ್ಟಂತಹ ಪರಿಹಾರದ ಹಣ ಎಷ್ಟು? ಕೇಂದ್ರ ಸರ್ಕಾರದಿಂದ ಬಂದಂತಹ ಪರಿಹಾರದ ಹಣ ಎಷ್ಟು? ಪ್ಲಾನ್ ಅಸಿಸ್ಟೆನ್ಸ್ ಆಗಿ ನಿಮಗೆ ಕೊಟ್ಟಂತಹ ಪರಿಹಾರದ ಹಣವನ್ನು ಯಾವ ಕಂಡಿಷನ್‌ನಲ್ಲಿ ಕೊಟ್ಟಿದ್ದಾರೆ. ನಿಮ್ಮಲ್ಲಿರತಕ್ಕಂತಹ ನ್ಯಾಚುರಲ್ ಕೆಲಾಮಿಟಿ ಫಂಡ್‌ನಲ್ಲಿ ಎಷ್ಟು ಹಣವನ್ನು ನೀವು ಖರ್ಚು ಮಾಡಿದ್ದೀರಿ. ಪ್ರತಿಯೊಂದು ಜಿಲ್ಲೆಯಲ್ಲಿ ಇನ್ನು ಎಷ್ಟು ಬೇಡಿಕೆಗಳು ಇದೆ. ಅದಕ್ಕೆ ತಾವು ಈ ಬಜೆಟ್‌ನಲ್ಲಿ ಏನೂ ಕೂಡ ಮಾಡಿಲ್ಲ. ಏಕೆ ಮಾಡಲಿಲ್ಲ? ಇದರಲ್ಲಿ ತಾವು ವಿಫಲರಾಗಿದ್ದೀರಿ ಎನ್ನುವಂತಹ ಮಾತನ್ನೂ ಕೂಡ ನಾನು ಕೇಳಿದ್ದೇನೆ. ಇದರ ಜೊತೆಯಲ್ಲಿ ರೈತರುಗಳು ಅನೇಕ ಜಿಲ್ಲೆಗಳಲ್ಲಿ ಸಾಕಷ್ಟು ಕಬ್ಬನ್ನು ಬೆಳೆದು ಕಂಗಾಲಾಗಿದ್ದಾರೆ. ಏಕೆಂದರೆ ನಮ್ಮಲ್ಲಿರತಕ್ಕಂತಹ ಕಾರ್ಖಾನೆಗಳು ಈಗ ನಾವು ಕಬ್ಬನ್ನು ಏನು ಬೆಳೆದಿದ್ದೇವೆ. ಇದನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಸುಮಾರು 250 ಲಕ್ಷ ಟನ್ ಕಬ್ಬಿನ ಉತ್ಪಾದನೆಯ ಗುರಿ ಇತ್ತು. ಅದಕ್ಕೆ ವಾಸ್ತವಿಕವಾಗಿ 240 ಲಕ್ಷ ಟನ್ ಕಬ್ಬು ಉತ್ಪಾದನೆಯಾಗಿದೆ; ಎನ್ನುವಂತಹ ಮಾತನ್ನು ಸರ್ಕಾರದವರೇ ತಮ್ಮ ಒಂದು ಸ್ಟಾರ್ಡ್ ಕೋಶ್ಚನ್‌ನಲ್ಲಿ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ಕೇಳಿದಂತಹ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಪ್ರತಿವರ್ಷ 2.6 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದ್ದರೂ ಈ ಬಾರಿ 3,20,000 ಹೆಕ್ಟೇರ್ ಭೂಮಿಯಲ್ಲಿ ಕಬ್ಬನ್ನು ಬೆಳೆಯಲಾಗಿದೆ. ಇದರಿಂದ ಹೆಚ್ಚು ಕಡಿಮೆ